1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ತೀರ್ಥಹಳ್ಳಿ

ಸಿ.ಸಿ. ನಂ: 1/2018

| | | |
|---|---|---|
| ಸಾಕ್ಷಿದಾರರ ಹೆಸರು | ಮಂಜುನಾಥ ಆರ್.ಟಿ | |
| ತಂದೆಯ ಹೆಸರು | ತಿಪ್ಪೇಸ್ವಾಮಿ | ಪಿಡಬ್ಲ್ಯೂ-4 |
| ವಯಸ್ಸು | 40 ವರ್ಷ | ಸಿಡಬ್ಲ್ಯೂ- 7 |
| ಉದ್ಯೋಗ | ವಲಯ ಅರಣ್ಯಾಧಿಕಾರಿ | |
| ವಾಸಸ್ಥಳ | ಉಂಬ್ಲೇಬೈಲು | |

ದಿಃ 14-02-2020 ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಅವರಿಂದಃ-

ನಾನು 2013 ರಿಂದ 2017 ರ ವರೆಗೆ ಮಂಡಗದ್ದೆ ವಲಯದದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 04-04-2016 ರಂದು ಚಾಸಾ-1 ರಿಂದ 5 ರವರು ಕಿಕ್ಕೇರಿ ಗ್ರಾಮದ ಸರ್ವೆ ನಂ. 35/2 ರ ಉಬ್ಬೂರು ಮೀಸಲು ಅರಣ್ಯದಲ್ಲಿ 02 ಬೀಟಿ ಮರಗಳನ್ನು ಕಡಿತಲೆ ಮಾಡಿದ ಸಂಬಂಧವಾಗಿ 24 ತುಂಡುಗಳನ್ನು ಲಾರಿಯೊಂದಿಗೆ ತೆಗೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ಚಾಸಾ-1 ರವರು ಪ್ರಕರಣ ದಾಖಲಿಸಿ ವರದಿಯೋಂದಿಗೆ ಪಂಚನಾಮೆಯನ್ನು ನನಗೆ ನೀಡಿರುತ್ತಾರೆ. ದಿಃ 05-04-2016 ರಂದು ಚಾಸಾ-1 ರವರು ಮೇಲೆ ಹೇಳಿದ ಸ್ಥಳದಲ್ಲಿ 05 ನಾಟಾಗಳನ್ನು ವಶಪಡಿಸಿಕೊಂಡು ಸ್ಥಳಪಂಚನಾಮೆಯೊಂದಿಗೆ ನನ್ನ ಮುಂದೆ ಹಾಜರುಡಿಸಿರುತ್ತಾರೆ. ನಂತರ ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಚಾಸಾ-6 ರವರನ್ನು ನಮ್ಮ ಕಛೇರಿಗೆ ಕರೆಸಿ ನಾಟಾ ತುಂಡುಗಳ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿಕೊಂಡಿರುತ್ತೇನೆ. ನಂತರ ಸದರಿ ಚಾಸಾ-6 ರವರು ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ತುಂಡುಗಳನ್ನು ಪರಿಶೀಲಿಸಿ ದೃಢೀಕರಣವನ್ನು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಆರೋಪಿಗಳ ಬಗ್ಗೆ ನಮಗೆ ಸುಳಿವು ದೊರೆತಿರುವುದಿಲ್ಲ. ನಂತರ ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ಲಾರಿಯಲ್ಲಿ ದೊರೆತ ಬಿ-ಎಕ್ಟ್ರಾಕ್ಟ್ ದಾಖಲಾತಿಯ ಆಧಾರದ ಮೇಲೆ ಈ ಪ್ರಕರಣದ ಆರೋಪಿಯ ವಿರುದ್ದ ತನಿಕೆಯನ್ನು ಕೈಗೊಂಡು ಸದರಿ ತನಿಕೆಯಲ್ಲಿ ಆರೋಪಿತನ ವಿರುದ್ದ ಆರೋಪಗಳು ಸಾಭೀತಾದ ಕಾರಣ ಅತನ ವಿರುದ್ದ ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ಓಡಿ ಹೋದ 05 ಜನರ ಮಾಹಿತಿ ದೊರೆತಿರುವುದಿಲ್ಲ. ಆದ್ದರಿಂದ ಅವರುಗಳ ವಿರುದ್ದ ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿದಾರರು 5 ರಿಂದ 10 ರ ಭಾವಚಿತ್ರಗಳನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಟಿ.ಎಲ್.ಎಂ. ವಕೀಲರಿಂದ.

ಈ ಪ್ರಕರಣದಲ್ಲಿ ಆರೋಪಿಯನ್ನು ನಾನು ನೋಡಿರುವುದಿಲ್ಲ. ನಮ್ಮ ಇಲಾಖೆಯಲ್ಲಿ ಅರಣ್ಯ ರಕ್ಷಕ, ಉಪವಲಯ ಅರಣ್ಯಾಧಿಕಾರಿ, ವಲಯ ಅರಣ್ಯಾಧಿಕಾರಿಗಳಿಗೆ ಪ್ರತ್ಯೇಕವಾದ ಸೀಲುಗಳು ಇರುತ್ತವೆ. ಸೀಜಿಂಗ್ ಹ್ಯಾಮರ್ ಗಳು ಬೇರೆ ಬೇರೆಯಾಗಿರುತ್ತವೆ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಆದರೆ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ದಿಃ 04-04-2016 ರಂದು 24 ತುಂಡುಗಳನ್ನು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಲಾರಿಯಲ್ಲಿ ತುಂಬಿಕೊಂಡು ಬಂದಿರುತ್ತಾರೆ. ಸದರಿ ತುಂಡುಗಳ ಮೇಲೆ ಚಾಪ ಗುರುತು ಇತ್ತು. ಈ ಪ್ರಕರಣದಲ್ಲಿ ಕಛೇರಿ ಆವರಣದಲ್ಲಿ ತೆಗೆದ ಭಾವಚಿತ್ರದ ಬಗ್ಗೆ ಮಹಜರನ್ನು

ಜರುಗಿಸಿರುತ್ತೇನೆ. ಭಾಚಿವತ್ರವನ್ನು ಚಾಸಾ-1 ಮತ್ತು ಅವರ ಸಿಬ್ಬಂದಿಯವರು ತೆಗೆದಿರುತ್ತಾರೆ. ಭಾವಚಿತ್ರ ತೆಗೆದ ಪಂಚನಾಮೆಯನ್ನು ಚಾಸಾ-1 ರವರು ಬರೆದಿರುತ್ತಾರೆ. ಸದರಿ ಭಾವಚಿತ್ರದ ಪಂಚನಾಮೆಗೆ ಸ್ಥಳೀಯ ಸಾಕ್ಷಿದಾರರನ್ನು ಕರೆಸಿದ ಬಗ್ಗೆ ನನಗೆ ಈಗ ನೆನಪಿಲ್ಲ. ನಮ್ಮ ಕಛೇರಿಯ ಅಕ್ಕಪಕ್ಕದ ಸ್ವಲ್ಪ ದೂರದಲ್ಲಿ ವಾಸದ ಮನೆಗಳು ಇರುತ್ತವೆ.

3. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ ಸಂಖ್ಯೆಗೊಸ್ಕರ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಅಧೀನ ಅಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖಾ ಅವಧಿಯಲ್ಲಿ ಈ ಪ್ರಕರಣದಲ್ಲಿ ಆರೊಪಿಗಳು ದೊರೆಯದ ಕಾರಣ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ದೊಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇದೆ**

1 ನೇ **ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ತೀರ್ಥಹಳ್ಳಿ.**